# JUNE 21, 2026

# AKASHAVANI - DHARWAD

# PRADESH SAMACHARA (KANNADA) 08.30 A.M.

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು:**

- **ಆರೋಗ್ಯಕರ ಮುಪ್ಪಿಗಾಗಿ ಯೋಗ:** ಧ್ಯೇಯದೊಂದಿಗೆ, ನಾಡಿನಾದ್ಯಂತ, ಜನೋತ್ಸಾಹದಲ್ಲಿ, 12ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆ.
- **ಮಾನವ ಜೀವನದ ಚೈತನ್ಯ ಹಾಗೂ ಪ್ರಕಾಶವೇ ಯೋಗ** – ಪ್ರಧಾನಮಂತ್ರಿ ನರೇಂದ್ರ ಮೋದಿ, ಪ್ರತಿಪಾದನೆ.
- **ರಾಜ್ಯದ 8 ಪ್ರಮುಖ ಐತಿಹಾಸಿಕ** ತಾಣಗಳಲ್ಲಿ, ಸಾಮುದಾಯಿಕ ಸಹಭಾಗಿತ್ವದಲ್ಲಿ, ಅಂತಾರಾಷ್ಟ್ರೀಯ ಯೋಗ ದಿನಾಚರಣೆ, ಯಶಸ್ವಿ.
- **ವೈದ್ಯಕೀಯ ಕೋರ್ಸ್‌ಗಳ ಪ್ರವೇಶಾತಿಗಾಗಿ,** ಇಂದು, ನೀಟ್ ಯು.ಜಿ. ಮರು ಪರೀಕ್ಷೆ; 22 ಲಕ್ಷ ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗುವ ನಿರೀಕ್ಷೆ.

<><><>

**ಈಗ ವಾರ್ತೆಗಳ ವಿವರ**

<><><>

**12ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆ,** 'ಆರೋಗ್ಯಕರ ಮುಪ್ಪಿಗಾಗಿ ಯೋಗ' ಎಂಬ ಧ್ಯೇಯದೊಂದಿಗೆ, ಇಂದು, ದೇಶಾದ್ಯಂತ 2 ಸಾವಿರದ ಐನೂರಕ್ಕೂ ಹೆಚ್ಚು ಸ್ಥಳಗಳಲ್ಲಿ, ಬೆಳಗ್ಗೆ 6.30

ರಿಂದ, ಯೋಗ ಗುರುಗಳ ಮಾರ್ಗದರ್ಶನದಲ್ಲಿ, ಕೋಟ್ಯಂತರ ಜನ, ಆಯ್ದ ಸರಳ 24 ಆಸನಗಳನ್ನು ಪ್ರದರ್ಶಿಸಿದರು. ಕೇಂದ್ರ ಆಯುಷ್ ಸಚಿವಾಲಯದ ನೇತೃತ್ವದಲ್ಲಿ, ಯುವಜನಸೇವಾ ಸಚಿವಾಲಯದ ಸಹಯೋಗದಲ್ಲಿ, ಅಂತಾರಾಷ್ಟ್ರೀಯ ಯೋಗ ದಿನಾಚರಣೆಯ, ಪ್ರಧಾನ ಕಾರ್ಯಕ್ರಮ, ಪಶ್ಚಿಮ ಬಂಗಾಳದ ರಾಜಧಾನಿ, ಕೊಲ್ಕೊತ್ತಾದ ರೆಡ್ ರೋಡ್‌ನಲ್ಲಿ, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಸಾರಥ್ಯದಲ್ಲಿ, ಯೋಗ ಗುರುಗಳ ಮಾರ್ಗದರ್ಶನದಲ್ಲಿ ನಡೆಯಿತು. 40 ಸಾವಿರಕ್ಕೂ ಅಧಿಕ ಜನ ಪಾಲ್ಗೊಂಡು, ಸುಲಭವಾದ ಯೋಗಾಸನಗಳನ್ನು ಪ್ರದರ್ಶಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಪ್ರಧಾನಮಂತ್ರಿ ನರೇಂದ್ರ ಮೋದಿ, ಕೊಲ್ಕೊತ್ತಾ ಸ್ವಚ್ಛತೆಯೊಂದಿಗೆ ಯೋಗವನ್ನು ಸ್ವಾಗತಿಸಿದ್ದು, ಶ್ಲಾಘನೀಯ ಎಂದರು. ಯೋಗ, ಮಾನವ ಜೀವನದ ಚೈತನ್ಯ ಹಾಗೂ ಪ್ರಕಾಶ ಎಂದು ಬಣ್ಣಿಸಿದ ಪ್ರಧಾನಮಂತ್ರಿ, ಇಡೀ ಜೀವನವೇ ಒಂದು ಯೋಗ ಎಂದ, ಮಹರ್ಷಿ ಶ್ರೀ ಅರವಿಂದರನ್ನು ವಿಶೇಷವಾಗಿ ಉಲ್ಲೇಖಿಸಿ, ಯೋಗ ನಮ್ಮ ಶಾರೀರಿಕ ಸ್ವಾಸ್ಥ್ಯದ ಮಾರ್ಗವನ್ನು, ಮಾನಸಿಕ ಸ್ವಾಸ್ಥ್ಯದ ಮೂಲಕ ದರ್ಶಿಸುತ್ತದೆ ಎಂದರು.

<><><>

**ಪ್ರಧಾನಮಂತ್ರಿ ನರೇಂದ್ರ ಮೋದಿ ಧ್ವನಿ– 51 ಸೆಕೆಂದುಗಳು**

<><><>

**ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಹಿನ್ನೆಲೆ,** ಕೇಂದ್ರ ಸಂಸ್ಕೃತಿ ಸಚಿವಾಲಯ, ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ – ಎ.ಎಸ್.ಐ. ಸಹಯೋಗದಲ್ಲಿ, ದೇಶದ ಪ್ರಮುಖ 100 ಐತಿಹಾಸಿಕ ಹಾಗೂ ಸಾಂಸ್ಕೃತಿಕ ಪ್ರಾಮುಖ್ಯತೆಯ ಸ್ಥಳಗಳಲ್ಲಿ, ವಿಶೇ ' ಯೋಗ ಪ್ರದರ್ಶನ ಆಯೋಜಿಸಿತ್ತು. ಲಕ್ಷಾಂತರ ಯೋಗಪಟುಗಳು, ಯೋಗಾಸಕ್ತರು, ಬೆಳಗ್ಗೆ ಶುಭ್ರ ವೇಶಧಾರಿಗಳಾಗಿ, ಚಿತ್ತ–ವೃತ್ತಿ ನಿರೋಧದ ಯೋಗಾಸನಗಳನ್ನು ಪ್ರದರ್ಶಿಸಿ, ಗಮನ ಸೆಳೆದರು. ಕರ್ನಾಟಕದ 8 ಪ್ರಮುಖ ಐತಿಹಾಸಿಕ ತಾಣಗಳಾದ, ಬಾಗಲಕೋಟೆ ಜಿಲ್ಲೆಯ, ಐಹೊಳೆ, ಬಾದಾಮಿ, ಪಟ್ಟದಕಲ್ಲು, ವಿಜಯಪುರ, ಹಾಸನ ಜಿಲ್ಲೆಯ ಹಳೆಬೀಡು, ವಿಜಯನಗರ ಜಿಲ್ಲೆಯ ಹಂಪಿ, ಬೆಂಗಳೂರು ಸೇರಿದಂತೆ, ಮಂಡ್ಯ ಜಿಲ್ಲೆಯ, ಶ್ರೀರಂಗಪಟ್ಟಣದಲ್ಲಿ, ಯೋಗ ಕಾರ್ಯಕ್ರಮಗಳು, ಸಹಸ್ರಾರು ಯೋಗಾಸಕ್ತರ ಯೋಗ ಪ್ರದರ್ಶನದೊಂದಿಗೆ, ಯಶಸ್ವಿಯಾಗಿ ಜರುಗಿದವು.

<><><>

**ವಿಶ್ವ ಪಾರಂಪರಿಕ ತಾಣ,** ಹಂಪಿಯ ಆನೆ ಲಾಯದ ಬಳಿ, ಯೋಗ ಪ್ರದರ್ಶನ ನಡೆಯಿತು ಎಂದು, ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯ, ವಿಜಯನಗರ ಜಿಲ್ಲೆ, ಹೊಸಪೇಟೆ ತಾಲೂಕು, ಹಂಪಿ ವೃತ್ತದ ಪುರಾತತ್ವ ಅಧೀಕ್ಷಕ ಕೆ. ರಾಮಕೃ ್ಣ ರೆಡ್ಡಿ, ಆಕಾಶವಾಣಿಗೆ ತಿಳಿಸಿದ್ದಾರೆ. ಹಂಪಿ ವಲಯದ, ಉಪ ಅಧೀಕ್ಷಕ ಪುರಾತತ್ವವಿದ, ಡಾಕ್ಟರ್ ಎಸ್.ಎಂ.ದೇವರಾಜ, ಪ್ರದೇಶ ಸಮಾಚಾರಕ್ಕಾಗಿ, ಮಾಹಿತಿ ನೀಡಿ, ವಿಶ್ವ ಪರಂಪರೆಯ ತಾಣಗಳಲ್ಲಿ, ಇಂದು ಮಧ್ಯಾಹ್ನ 12 ಗಂಟೆಯ ವರೆಗೆ, ಯೋಗ ಪ್ರದರ್ಶನ ಹಾಗೂ ಯೋಗಾಭ್ಯಾಸಕ್ಕೆ, ಅವಕಾಶ ಕಲ್ಪಿಸಲಾಗಿದೆ ಎಂದರು. ಈ ಕುರಿತು, ವಿಜಯನಗರದ ನಮ್ಮ ಪ್ರತಿನಿಧಿಯಿಂದ, ಪ್ರದೇಶ ಸಮಾಚಾರಕ್ಕಾಗಿ, ಹೆಚ್ಚಿನ ಮಾಹಿತಿ..

<><><>

**ಪೂರ್ಣಿಮಾ ದಫ್ತರ್‌ದಾರ ಧ್ವನಿ– 47 ಸೆಕೆಂದುಗಳು**

<><><>

<><><>

**ಈಗ ಪ್ರಕಟಣೆ, ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..**

**(37 ಸೆಕೆಂದುಗಳು)**

<><><>

**ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..**

<><><>

**ಅಂತಾರಾಷ್ಟ್ರೀಯ ಯೋಗ ದಿನಾಚರಣೆಯ,** ಪ್ರಧಾನ ಕಾರ್ಯಕ್ರಮ, ಇಂದು ಬೆಳಗ್ಗೆ 7 ಗಂಟೆಗೆ, ಬೆಂಗಳೂರಿನ ವಿಧಾನಸೌಧದ, ಭವ್ಯ ಮೆಟ್ಟಿಲುಗಳ ಮೇಲೆ, ಜರುಗಿತು. ರಾಜ್ಯಪಾಲ ಥಾವರಚಂದ ಗೆಹ್ಲೋಟ, ಅಂತಾರಾಷ್ಟ್ರೀಯ ಯೋಗ ದಿನಾಚರಣೆಗೆ, ವಿಧ್ಯುಕ್ತ ಚಾಲನೆ ನೀಡಿದರು. ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಸೇರಿದಂತೆ, ಸಚಿವ ಸಂಪುಟದ ಹಿರಿಯ ಸಹೋದ್ಯೋಗಿಗಳು, ಗಣ್ಯರು, ಯೋಗ ಗುರುಗಳ ಮಾರ್ಗದರ್ಶನದಲ್ಲಿ, ಸರಳವಾದ 24 ಯೋಗಾಸನಗಳನ್ನು, ಪ್ರದರ್ಶಿಸಿದರು. ಶಾಸಕ ರಿಜ್ವಾನ್ ಅ ರ್ದ್ ಅಧ್ಯಕ್ಷತೆ ವಹಿಸಿದ್ದರು. 2 ಸಾವಿರಕ್ಕೂ ಹೆಚ್ಚು ಯೋಗ ಸಾಧಕರು ಹಾಗೂ ಯೋಗಪಟುಗಳು, ಪಾಲ್ಗೊಂಡಿದ್ದರು. 40 ನಿಮಿ ಗಳ ಯೋಗಾಸನದ ಬಳಿಕ, ಸಭಾ ಕಾರ್ಯಕ್ರಮ ನಡೆಯಿತು.

<><><>

**ಯುವಜನತೆಗೆ ಹಾಗೂ ವೃತ್ತಿಪರರಿಗೆ ಯೋಗಾಭ್ಯಾಸ ಮೈಗೂಡಿಸಲು,** Y-Break ಎಂಬ App ಅನ್ನು ರೂಪಿಸಲಾಗಿದೆ; ತನ್ಮೂಲಕ, ಯೋಗಾಭ್ಯಾಸಕ್ಕೆ ಪ್ರೇರೇಪಿಸಲಾಗುತ್ತಿದೆ ಎಂದು, ಆಯುಷ್ ಇಲಾಖೆಯ, ರಾಯಚೂರು ಜಿಲ್ಲೆ ಅಧಿಕಾರಿ ಡಾಕ್ಟರ್ ಶಂಕರ ಗೌಡ, ತಿಳಿಸಿದ್ದಾರೆ. ಯೋಗದ ಮಹತ್ವವನ್ನು ಸಾರಲು ಹಾಗೂ ನಿತ್ಯ ಯೋಗ ಅಭ್ಯಾಸಕ್ಕಾಗಿ, ಬೆಳಗ್ಗೆ 5.30 ರಿಂದ 6.30ರ ವರೆಗೆ, ಯೋಗಾಭ್ಯಾಸದ ಕಾರ್ಯಕ್ರಮಗಳನ್ನು ರಾಯಚೂರು ಜಿಲ್ಲೆಯಾದ್ಯಂತ, ಆಯೋಜಿಸಲಾಗುವುದು ಎಂದರು. ನಾಳೆ 22 ರಿಂದ, 2027ರ ಜೂನ್ 21ರ ವರೆಗೆ, ವರ್ಷಪೂರ್ತಿ ರಾಜ್ಯಾದ್ಯಂತ, ಯೋಗಾಭ್ಯಾಸ ಹಾಗೂ ಯೋಗ ಪ್ರಚಾರದ, ವಿಶೇಷ ಕಾರ್ಯಕ್ರಮ ಅನುಷ್ಠಾನಗೊಳ್ಳಲಿದೆ, ಎಂದು ಹೇಳಿದರು.

<><><>

**ವೈದ್ಯಕೀಯ ಕೋರ್ಸ್‌ಗಳ ಅಧ್ಯಯನಕ್ಕಾಗಿ,** ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ ಪರೀಕ್ಷೆ – ನೀಟ್ ಯು.ಜಿ. 2026ರ ಮರು ಪರೀಕ್ಷೆ, ಇಂದು ದೇಶಾದ್ಯಂತ ನಡೆಯಲಿದೆ. ದೇಶದ 551 ನಗರಗಳು ಮತ್ತು ವಿದೇಶಗಳ 14 ನಗರಗಳಲ್ಲಿ ಏಕಕಾಲಕ್ಕೆ, ಮಧ್ಯಾಹ್ನ 2 ಗಂಟೆಯಿಂದ, ಸಂಜೆ 5.30ರ ವರೆಗೆ ನೀಟ್ ಪರೀಕ್ಷೆ ನಡೆಯಲಿದೆ. ಒಟ್ಟು 22 ಲಕ್ಷದ 79 ಸಾವಿರ ಅಭ್ಯರ್ಥಿಗಳು, ಹೆಸರು ನೋಂದಾಯಿಸಿದ್ದಾಗಿ, ನ್ಯಾಶನಲ್ ಟೆಸ್ಟಿಂಗ್ ಏಜನ್ಸಿ ತಿಳಿಸಿದೆ. ನೀಟ್ ಪರೀಕ್ಷೆ ಹಿನ್ನೆಲೆ, ಸುಗಮ ಸಂಚಾರಕ್ಕೆ ವ್ಯವಸ್ಥೆ ಮತ್ತು ಆದ್ಯತೆ ನೀಡಲಾಗಿದೆ ಎಂದು, ಗೃಹ ಖಾತೆ ಸಚಿವ, ಪ್ರಿಯಾಂಕ ಖರ್ಗೆ, ತಿಳಿಸಿದ್ದಾರೆ. ಪರೀಕ್ಷಾರ್ಥಿಗಳು ಸಂಚಾರ ದಟ್ಟಣೆಯಲ್ಲಿ ಸಿಲುಕಿದಲ್ಲಿ, ಸಂಚಾರ ಪೊಲೀಸ್ ನಿಯಂತ್ರಣ ಕೊಠಡಿ ಸಹಾಯವಾಣಿ, 22–94–31–31 ಅಥವಾ 22–94–30–30ಕ್ಕೆ ಸಂಪರ್ಕಿಸಲು, ಕೋರಿದ್ದಾರೆ. ಬಳ್ಳಾರಿ ಜಿಲ್ಲೆಯ, 11 ಕೇಂದ್ರಗಳಲ್ಲಿ ನೀಟ್ ಪರೀಕ್ಷೆ ನಡೆಯಲಿದೆ ಎಂದು, ಜಿಲ್ಲಾಧಿಕಾರಿ ಕೆ.ನಾಗೇಂದ್ರ ಪ್ರಸಾದ ತಿಳಿಸಿದ್ದಾರೆ. ದಕ್ಷಿಣಕನ್ನಡ ಜಿಲ್ಲೆಯಾದ್ಯಂತ, 12 ಕೇಂದ್ರಗಳಲ್ಲಿ ನೀಟ್ ಪರೀಕ್ಷೆ ನಡೆಯಲಿದ್ದು, 5 ಸಾವಿರದ 5 ನೂರಾ 70 ವಿದ್ಯಾರ್ಥಿಗಳು ಹೆಸರು ನೋಂದಾಯಿಸಿದ್ದಾಗಿ, ಅಪರ ಜಿಲ್ಲಾಧಿಕಾರಿ ಕೆ.ರಾಜು ತಿಳಿಸಿದ್ದಾರೆ.

<><><>

**ಕೊಂಕಣ ರೇಲ್ವೆಯ,** ಮೂಲಭೂತ ಆಗತ್ಯತೆಗಳ ಸಮಗ್ರ ಅಭಿವೃದ್ಧಿಗಾಗಿ, 7 ಸಾವಿರ ಕೋಟಿ ರೂಪಾಯಿಗಳ ಪ್ರಸ್ತಾವವನ್ನು, ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿದೆ ಎಂದು, ಉತ್ತರಕನ್ನಡ ಲೋಕಸಭಾ ಕ್ಷೇತ್ರದ ಸಂಸದ, ವಿಶ್ವೇಶ್ವರ ಹೆಗಡೆ ಕಾಗೇರಿ ತಿಳಿಸಿದ್ದಾರೆ.

ಉತ್ತರಕನ್ನಡ ಜಿಲ್ಲೆ, ಕುಮಟಾ ರೈಲು ನಿಲ್ದಾಣದಲ್ಲಿ, 2 ಕೋಟಿ ರೂಪಾಯಿ ವೆಚ್ಚದಲ್ಲಿ ನಿರ್ಮಾಣಗೊಂಡ, ನೂತನ ಪ್ಲ್ಯಾಟ್‌ಫಾರಂ ಉದ್ಘಾಟಿಸಿ, ಕಾಚಿಗುಡ–ಕುಮಟಾ ವರೆಗೆ ವಿಸ್ತರಿಸಿರುವ, ರೈಲು ಸೇವೆಗೆ, ಹಸಿರು ಧ್ವಜ ತೋರಿ ಮಾತನಾಡಿದರು. ಕೊಂಕಣ ರೇಲ್ವೆ ಮೂಲ ಸೌಕರ್ಯ ಅಭಿವೃದ್ಧಿ ಪ್ರಸ್ತಾವಕ್ಕೆ, ಶೀಘ್ರ ಕೇಂದ್ರ ಸಚಿವ ಸಂಪುಟದ ಅನುಮೋದನೆ ದೊರೆಯಲಿದೆ ಎಂಬ ವಿಶ್ವಾಸ ವ್ಯಕ್ತ ಪಡಿಸಿದ, ಸಂಸದ ಕಾಗೇರಿ, ಬೆಂಗಳೂರು–ಮಂಗಳೂರು ಮಧ್ಯದ, ವಂದೇ ಭಾರತ್ ರೈಲನ್ನು, ಕಾರವಾರದ ವರೆಗೂ ವಿಸ್ತರಿಸಲು, ಕರಾವಳಿ ಜಿಲ್ಲೆಗಳ ಲೋಕಸಭಾ ಕ್ಷೇತ್ರಗಳ ಎಲ್ಲ ಸಂಸದರು, ಮನವಿ ಮಾಡಿದ್ದಾಗಿ ಹೇಳಿದರು.  ಗೋಕರ್ಣದ ರೈಲು ನಿಲ್ದಾಣ ಮೇಲ್ದರ್ಜೆಗೇರಿದೆ. ಭಟ್ಕಳದಲ್ಲಿ 53 ಲಕ್ಷ ರೂಪಾಯಿ ವೆಚ್ಚದ ಕಾಮಗಾರಿ ಹಾಗೂ ಮುರುಡೇಶ್ವರದಲ್ಲಿ 10 ರೂಪಾಯಿ ಲಕ್ಷ ವೆಚ್ಚದ ಕಾಮಗಾರಿ ಸೇರಿದಂತೆ, ಒಟ್ಟು 10 ಕೋಟಿ ರೂಪಾಯಿ ಮೌಲ್ಯದ, ಸಾರ್ವಜನಿಕ ಮೂಲಸೌಕರ್ಯ ಕಾಮಗಾರಿಗಳನ್ನು ಲೋಕಾರ್ಪಣೆ ಮಾಡಲಾಗಿದೆ ಎಂದು, ಸಂಸದ ಕಾಗೇರಿ ತಿಳಿಸಿದರು.

<><><>

**ಬಾಗಲಕೋಟೆ ಜಿಲ್ಲೆ, ಮುಧೋಳದ,** ಶ್ರೀ ಮೃತ್ಯುಂಜಯ ಅಪ್ಪಗಳವರ, ಅಪಾರ ಕನ್ನಡದ ಪ್ರೀತಿ ಹಾಗೂ ಕಳಕಳಿಯಿಂದ, ಇಂದು ಸೋಲಾಪುರದಲ್ಲಿ, ಕನ್ನಡ ಸಂಪದ್ಭರಿತವಾಗಿ ಬೆಳೆದಿದೆ ಎಂದು, ಸೋಲಾಪುರದ ಕೀರಿಟೇಶ್ವರ ಮಠದ ಸ್ವಾಮಿನಾಥ ಸ್ವಾಮೀಜಿ, ತಿಳಿಸಿದ್ದಾರೆ. ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘ, ಸೋಲಾಪುರ ಜಿಲ್ಲೆಯ, ಕನ್ನಡ ಸಂಘಗಳ ಸಹಯೋಗದಲ್ಲಿ, ಹುತಾತ್ಮ ಸ್ಮೃತಿ ಮಂದಿರದ, ಸೊನ್ನಲಗಿ ಸಿದ್ಧರಾಮ ಸಭಾಂಗಣ ಮತ್ತು ವಾರದ ಮಲ್ಲಪ್ಪನವರ ವೇದಿಕೆಯಲ್ಲಿ ಆಯೋಜಿಸಿದ, ಅಖಿಲ ಭಾರತ, ಹೊರನಾಡ ಕನ್ನಡ ಸಂಘಗಳ ಪ್ರತಿನಿಧಿಗಳ, 10ನೇ ಮಹಾಮೇಳವನ್ನು ಉದ್ಘಾಟಿಸಿ, ಮಾತನಾಡಿದರು.  ಸೋಲಾಪುರದ ರುದ್ರಾಂಬಿಕಾ ತಾಯಿ, ಶ್ರೀ ಮೃತ್ಯುಂಜಯ ಅಪ್ಪಗಳನ್ನು ಮಧೋಳದಿಂದ ಕರೆಯಿಸಿ, ಪ್ರವಚನ ಮಾಡಿಸುತ್ತಿದ್ದರು ಎಂದು, ಸ್ವಾಮೀಜಿ ಸ್ಮರಿಸಿದರು.  ಕರ್ನಾಟಕ ವಿದ್ಯಾವರ್ಧಕ ಸಂಘ ಪ್ರಕಟಿಸಿದ, ವಾಗ್ಭೂ ʼಣ ತ್ರೈಮಾಸಿಕ ಪತ್ರಿಕೆಯನ್ನು, ಶಿಕ್ಷಣ ಇಲಾಖೆಯ ನಿವೃತ್ತ ಆಯುಕ್ತ, ವೆಂಕಟೇಶ ಮಾಚಕನೂರ ಬಿಡುಗಡೆ ಮಾಡಿದರು. ಕರ್ನಾಟಕ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಚಂದ್ರಕಾಂತ ಬೆಲ್ಲದ ಅಧ್ಯಕ್ಷತೆ ವಹಿಸಿದ್ದರು. ಸೋಲಾಪುರ ಜಿಲ್ಲೆಯ, ಕನ್ನಡ ಸಂಘಗಳ, 600ಕ್ಕೂ ಹೆಚ್ಚು ಪ್ರತಿನಿಧಿಗಳು, ಮಹಾಮೇಳದಲ್ಲಿ ಪಾಲ್ಗೊಂಡಿದ್ದಾರೆ.

<><><>

**ಪ್ರಧಾನಮಂತ್ರಿ–ಜನ ಮನ** ಯೋಜನೆ ಅಡಿ, ದಕ್ಷಿಣಕನ್ನಡ ಜಿಲ್ಲೆ, ಕಡಬ ತಾಲೂಕು, ರಾಮಕುಂಜ, ಪೆರಾಬೆ, ಅಲಂಕಾರು ಗ್ರಾಮ ಪಂಚಾಯಿತಿ ವ್ಯಾಪ್ತಿಯ, ಪರಕ್ಕಾಲು ಕೊರಗ ಕಾಲೊನಿಯಲ್ಲಿ, 2 ಕೋಟಿ

75 ಲಕ್ಷ ರೂಪಾಯಿ ವೆಚ್ಚದಲ್ಲಿ, ಅಭಿವೃದ್ಧಿ ಪಡಿಸಲಾದ ರಸ್ತೆಯನ್ನು, ದಕ್ಷಿಣಕನ್ನಡ ಲೋಕಸಭಾ ಕ್ಷೇತ್ರದ ಸಂಸದ ಬ್ರಿಜೇಶ ಚೌಟ ಉದ್ಘಾಟಿಸಿದರು.

<><><>

**ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:**

**ಆರೋಗ್ಯಕರ ಮುಪ್ಪಿಗಾಗಿ ಯೋಗ;** ಧ್ಯೇಯದೊಂದಿಗೆ, ನಾಡಿನಾದ್ಯಂತ, ಜನೋತ್ಸಾಹದಲ್ಲಿ, 12ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆ.

**ಮಾನವ ಜೀವನದ ಚೈತನ್ಯ ಹಾಗೂ ಪ್ರಕಾಶವೇ ಯೋಗ** – ಪ್ರಧಾನಮಂತ್ರಿ ನರೇಂದ್ರ ಮೋದಿ, ಪ್ರತಿಪಾದನೆ.

**ರಾಜ್ಯದ 8 ಪ್ರಮುಖ ಐತಿಹಾಸಿಕ** ತಾಣಗಳಲ್ಲಿ, ಸಾಮುದಾಯಿಕ ಸಹಭಾಗಿತ್ವದಲ್ಲಿ, ಅಂತಾರಾಷ್ಟ್ರೀಯ ಯೋಗ ದಿನಾಚರಣೆ, ಯಶಸ್ವಿ.

**ವೈದ್ಯಕೀಯ ಕೋರ್ಸ್‌ಗಳ ಪ್ರವೇಶಾತಿಗಾಗಿ,** ಇಂದು, ನೀಟ್ ಯು.ಜಿ. ಮರು ಪರೀಕ್ಷೆ; 22 ಲಕ್ಷ ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗುವ ನಿರೀಕ್ಷೆ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 9 ಗಂಟೆ 5 ನಿಮಿಷಕ್ಕೆ.**

<><><>